ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 172/2025

ಸಿ ಡಬ್ಲ್ಯೂ-1

ಪಿ ಡಬ್ಲ್ಯೂ- 1

ದಿಃ 24-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಚಂದ್ರಕಾಂತ ನಾಯ್ಕು

ತಂದೆಯ ಹೆಸರುಃ ದಾಡು ನಾಯ್ಕು

ವಯಸ್ಸುಃ 65 ವರ್ಷ

ಉದ್ಯೋಗಃ ಕೂಲಿ ಕೆಲಸ

ವಿಳಾಸಃ ಮಾವಿನಕೇರಿ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-2 ರಿಂದ 9 ರವರ ಪರಿಚಯ ಇರುವುದಿಲ್ಲ. ಮೃತ ಗೇಣು ಶೇಶು ನಾಯ್ಕು ಇವರ ಪರಿಚಯವಿರುವುದಿಲ್ಲ. ಆರೋಪಿಯ ಪರಿಚಯ ಇರುವುದಿಲ್ಲ. ಆರೋಪಿಯನ್ನು ನಾನು ನೋಡಿರುವುದಿಲ್ಲ. ನಾನು ಪೊಲೀಸರು ಮುಂದೆ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನಾನು ಅಪಘಾತವನ್ನು ನೋಡಿರುತ್ತೇನೆ, ಅಪಘಾತವಾಗಿದೆ ಎಂದು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನನಗೆ ಈ ಪ್ರಕರಣದ ಮಾಹಿತಿ ಇರುವುದಿಲ್ಲ. ಆರೋಪಿಯ ಅತಿವೇಗದಿಂದ ಹಾಗೂ ನಿಷ್ಕಾಳಜೀತನದಿಂದ ಅಪಘಾತವಾಗಿದ್ದು, ಗೇಣು ಶೇಶು ನಾಯ್ಕು ಇವರು ಸದರಿ ಅಪಘಾತದಿಂದ ಮರಣಪಟ್ಟಿರುತ್ತಾರೆ ಎಂದು ನಾನು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನಾನು ಅಪಘಾತ ವಿಷಯ ತಿಳಿದು, ಸದರಿ ಅಪಘಾತ ಸ್ಥಳಕ್ಕೆ ಹೋಗಿ

ಅಪಘಾತವಾಗಿರುತ್ತದೆ ಎಂದು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ಅದೇ ರೀತಿ ಅಪಘಾತಕ್ಕೆ ಸಂಬಂಧಪಟ್ಟು ಯಾವುದೇ ಮರು ಹೇಳಿಕಯನ್ನೂ ಸಹ ಕೊಟ್ಟಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ, ಸದರಿ ದಾಖಲೆ ದೂರು ಆಗಿದ್ದು, ಸಾಕ್ಷಿಯು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ–1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–1ಎ ಎಂದು ಗುರುತಿಸಲಾಯಿತು. ನಾನು ಸದರಿ ಸಹಿಯನ್ನು ಪೊಲೀಸ್ ಠಾಣೆಗೆ ಹೋದಾಗ ಮಾಡಿರುತ್ತೇನೆ. ನಾನು ಬೇರೆ ವಿಷಯಕ್ಕೆ ಪೊಲೀಸ್ ಠಾಣೆಗೆ ಹೋದಾಗ ಸಹಿ ಮಾಡಿಸಿಕೊಂಡಿರುತ್ತಾರೆ. ಯಾವ ವಿಚಾರಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ ಹಾಗೂ ಕೇಳಿರುವುದಿಲ್ಲ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ತಿಳಿಸಿದುಕೊಂಡಿರುವುದಿಲ್ಲ. ನಾನು ಅಂದಾಜು 1 ವರ್ಷದ ಹಿಂದೆ ಸಹಿಯನ್ನು ಮಾಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ನೀವು ಎಲ್ಲಿಯವರೆಗೆ ಓದಿರುತ್ತೀರಿ ಎಂದರೆ ಸಾಕ್ಷಿಯು 6ನೇ ತರಗತಿಯವರೆಗೆ ಓದಿರುತ್ತೇನೆ ಎಂದು ನುಡಿಯುತ್ತಾರೆ. ನಿಮಗೆ ಕನ್ನಡ ಓದಲು ಹಾಗೂ ಬರೆಯಲು ಬರುತ್ತದೆ ಎಂದರೆ ಸರಿ. ಗೇಣು ಶೇಶು ನಾಯ್ಕು ನಿಮ್ಮ ಚಿಕ್ಕಪ್ಪ ಎಂದರೆ ಸಾಕ್ಷಿಯು ಅಲ್ಲ ಆ ರೀತಿ ಪೊಲೀಸರು ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

3. ದಿಃ 26-06-2024 ರಂದು ಮಧ್ಯಾಹ್ನ 3.30 ಗಂಟೆಗೆ ನೀವು ಮನೆಯಲ್ಲಿ ಇದ್ದಾಗ ನಿಮ್ಮ ಚಿಕ್ಕಪ್ಪ ಗೇಣು ಶೇಶು ನಾಯ್ಕ ಇವರಿಗೆ ಅಪಘಾತವಾಗಿರುತ್ತದೆ ಎಂದು ವಿಷಯ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತ ಅಂಕೋಲಾ ತಾಲೂಕಿ ಹಟ್ಟಿಕೇರಿ ಬಾಬು ಗ್ಯಾರೇಜ್ ಹತ್ತಿರ ಅಪಘಾತವಾಗಿರುತ್ತದೆ ಎಂದು ತಿಳಿದು ಅಲ್ಲಿಗೆ ಹೋಗಿರುತ್ತೀರಿ ಎಂದರೆ ಸರಿಯಲ್ಲ. ನೀವು ಅಲ್ಲಿಗೆ ಹೋದಾಗ ಸುಮಾರು ಜನರು ಸೇರಿದ್ದು, ಒಂದು ಮೋಟರ್ ಸೈಕಲ್ ಬಿದ್ದಿತ್ತು ಎಂದರೆ ಸರಿಯಲ್ಲ. ಅಲ್ಲಿ ಸೇರಿದ ಜನರನ್ನು ನೀವು ವಿಚಾರಣೆ ಮಾಡಿದಾಗ ಮಧ್ಯಾಹ್ನ 3 ಗಂಟೆಯ ಹಟ್ಟಿಕೇರಿಯ ರಾಷ್ಟ್ರೀಯ ಹೆದ್ದಾರಿ-63 ರಸ್ತೆಯಲ್ಲಿ ಆರೋಪಿತನು ಕಾರವಾರಕಡೆಯಿಂದ ಅಂಕೋಲಾ ಕಡೆಗೆ ತನ್ನ ಮೋಟರ್ ಸೈಕಲನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದವನು ತನ್ನ ಚಾಲನೆಯ ಮೇಲೆ ನಿಯಂತ್ರಣವನ್ನು ಕಳೆದುಕೊಂಡು ರಸ್ತೆಯ ಬದಿಯಲ್ಲಿ ಅವರ್ಸಾದಿಂದ ಹಟ್ಟಿಕೇರಿಯ ಕಟ್ಟಿಗೆಯ ಡಿಪೋದೇ ಕಡೆಗೆ ನಡೆದುಕೊಂಡು ಹೋಗುತ್ತಿದ್ದ ಗೇಣು ಶೇಶು ನಾಯ್ಕ ಇವರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದು, ಅಪಘಾತಪಡಿಸಿ, ಮೋಟರ್ ಸೈಕಲ್ ಸಮೇತ ರಸ್ತೆಯ ಮೇಲೆ ಬೀಳಿಸಿ, ಅವರ ತಲೆಗೆ ಭಾರಿ ಸ್ವರೂಪದ ಗಾಯವಾಗಿದ್ದು, ಮೋಟರ್ ಸೈಕಲ್ ಹಿಂಬದಿ ಸವಾರನಿಗೆ ಮುಖದ ಬದಿಯಲ್ಲಿ ಗಾಯನೋವು ಆಗಿದ್ದು, ಹಾಗೂ ಆರೋಪಿತನಿಗೂ ಸಹ ಗಾಯನೋವು ಪಡಿಸಿಕೊಂಡಿದ್ದು ನಿಮಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು, ಸದರಿ ಸ್ಥಳಕ್ಕೆ ಹೋಗಿದ್ದೇ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅಪಘಾತಪಡಿಸಿದ ಮೋಟರ್ ಸೈಕಲ್ ನಂ. ಕೆ ಎ 30 ಜೆ 2356 ನೆದ್ದು ಆಗಿತ್ತು ಎಂದರೆ ಗೊತ್ತಿರುವುದಿಲ್ಲ. ಸದರಿ ಮೋಟರ್ ಸೈಕಲ್ ಮಾಲೀಕನ ಹೆಸರು ವೀಕ್ಷಿತ್ ವೆಂಕಟದಾಸ್ ನಾಯಕ ಎಂದು ಹಾಗೂ ಮೋಟರ್ ಸೈಕಲ್ ಹಿಂಬದಿ ಸವಾರ

ಸದರಿ ಆರೋಪಿ ಆಗಿರುತ್ತಾನೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಗಾಯಗೊಂಡ ಗಾಯಾಳುಗಳಿಗೆ ನಾನು ಹಾಗೂ ಅಲ್ಲಿ ಸೇರಿದ ಜನರು ಸೇರಿಕೊಂಡು ಐ ಆರ್ ಬಿ ಅಂಬುಲೆನ್ಸ ಮುಖಾಂತರ ಅವರನ್ನು ತಾಲೂಕಾ ಆಸ್ಪತ್ರೆ ಅಂಕೋಲಾಗೆ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನಿಮ್ಮ ಚಿಕ್ಕಪ್ಪನಾದ ಗೇಣು ಶೇಶು ನಾಯ್ಕ ಇವರಿಗೆ ಹೆಚ್ಚಿನ ಉಪಚಾರಕ್ಕೆ ಕಾರವಾರ ಜಿಲ್ಲಾ ಆಸ್ಪತ್ರೆಗೆ ಸೇರಿಸಿರುತ್ತೀರಿ ಎಂದರೆ ಸರಿಯಲ್ಲ. ಅವರ ತಲೆಯ ಭಾಗದಲ್ಲಿ ಭಾರಿ ಗಾಯವಾಗಿದ್ದರಿಂದ ದಿಃ27-06-2024 ರಂದು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಕೆ ಎಸ್ ಹೆಗಡೆ ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಸದರಿ ಮೊಟರ್ ಸೈಕಲ್ ನಂ. ಕೆ ಎ 30 ಜಿ 2356 ನೆದ್ದರ ಚಾಲಕನ ಮೇಲೆ ಅತಿ ವೇಗ ಹಾಗೂ ಅಜಾಗರೂಕತೆಯ ಚಾಲನೆ ಮಾಡಿದ್ದರಿಂದ ಸದರಿ ಅಪಘಾತ ಸಂಭವಿಸಿದೆ ಎಂದು ತಿಳಿಸಿದ್ದು ಚಾಲಕನ ಮೇಲೆ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಬರೆದಿರುವ ಎಲ್ಲ ವಿಚಾರಗಳ ಬಗ್ಗೆ ನಿಮಗೆ ಸ್ಪಷ್ಟ ಹಾಗೂ ಸಂಪೂರ್ಣ ಮಾಹಿತಿ ಇದ್ದರೂ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ, ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಸಂಭವಿಸಿದೆ ಎಂದು ತಿಳಿದುಕೊಂಡು ದೂರನ್ನು ನೀಡಿದ್ದರೂ ಸಹ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಂಪೂರ್ಣ ವಿಷಯವನ್ನು ತಿಳಿದಿದ್ದರೂ ಸಹ ತಿಳಿದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ವಾಹನದ ಚಾಲಕನ ತಪ್ಪಿನಿಂದಲೇ ಅಪಘಾತ ಸಂಭವಿಸಿದೆ ಎಂದು ತಿಳಿದಿದ್ದರೂ ತಿಳಿದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ30-06-2024 ರಂದು ನೀವು ನಿಮ್ಮ ಮರುಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯಲ್ಲಿ ನೀವು ದೂರನ್ನು

ನೀಡುವಾಗ ವಿಕ್ಷೀತ್ ವೆಂಕಟದಾಸ್ ನಾಯ್ಕ( CW-8) ಸದರಿ ಇವರು ವಾಹನವನ್ನು ಚಲಾಯಿಸುತ್ತಿದ್ದು, ಹಾಗೂ ವಾಹನದ ಹಿಂಬದಿಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಕುಳಿತುಕೊಂಡಿದ್ದನು ಎಂದು ನಿಮ್ಮ ದೂರಿನಲ್ಲಿ ನಮೂದಿಸಿದ್ದು, ಆ ನಂತರ ನನಗೆ ತಿಳಿದುಕೊಂಡ ಪ್ರಕಾರ ಸದರಿ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಸದರಿ ವಾಹನವನ್ನು ಚಲಾಯಿಸುತ್ತಿದ್ದ ಎಂದು ಹಾಗೂ ಸದರಿ ವಾಹನದ ಮಾಲೀಕನೆಂದು ಸದರಿ ಅಪಘಾತ್ಕೆ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಕಾರಣ ಎಂದು ಮರು ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಮರು ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ನೀವು ಮರುಹೇಳಿಕೆಯನ್ನು ನೀಡಿದ್ದರೂ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮರುಹೇಳಿಕೆಯಲ್ಲಿ ಬರೆದ ಸಂಪೂರ್ಣ ವಿಚಾರ ಗೊತ್ತಿದ್ದರೂ, ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ದಿಃ 23-07-2024 ರಂದು ನಿಮ್ಮ ಮುಂದುವರೆದ ಮರುಹೇಳಿಕೆಯಲ್ಲಿ ಸದರಿ ಅಪಘಾತದಿಂದ ಗಾಯಗೊಂಡ ಗೇಣು ಶೇಶು ನಾಯ್ಕ ಇವರು ದಿಃ23-07-2024 ರಂದು ರಾತ್ರಿ 12.10 ಗಂಟೆಗೆ ಹೆಚ್ಚಿನ ಉಪಚಾರದಲ್ಲಿದ್ದಾಗ ಮೃತ ಪಟ್ಟಿರುವ ಬಗ್ಗೆ ತಿಳಿದು ಬಂದ ಕಾರಣ ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದ ಮರುಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನೀವು ನಿಪಿ-3 ರಂತೆ ಮುಂದುವರೆದ ಹೇಳಿಕೆಯನ್ನು ನೀಡಿದ್ದರೂ ಸಹ ನೀಡಿಲ್ಲವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮೃತ ಗೇಣು ಶೇಶು ನಾಯ್ಕ ನಿಮ್ಮ ಚಿಕ್ಕಪ್ಪನಾದರೂ ಚಿಕ್ಕಪ್ಪ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-2

ರಿಂದ 10 ರವರು ನಿಮ್ಮ ಊರಿನವರು ಹಾಗೂ ಪಕ್ಕದ ಊರಿನವರು ಆಗಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರ ಪರಿಚಯ ಇದ್ದರೂ ಸಹ ಪರಿಚಯವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತನ ಪರಿಚಯವಿದ್ದರೂ ಪರಿಚಯ ಇದ್ದರೂ ಪರಿಚಯವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ಜೊತೆಗೆ ಸಂಗನಮತ ಮಾಡಿಕೊಂಡು ಆತನಿಗೆ ಸಹಾಯವಾಗಲೆಂದು ಅಪಘಾತದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಮತ್ತು ದೂರನ್ನು ನೀಡಿದ್ದರೂ ನೀಡಿಲ್ಲ ಎಂದು ಹಾಗೂ ಅಪಘಾತದ ಬಗ್ಗೆ ತಿಳಿದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಜೊತೆಗೆ ರಾಜಿ ಮಾಡಿಕೊಂಡು, ಆತನಿಗೆ ಸಹಾಯ ಮಾಡುವ ದೃಷ್ಟಿಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.